ಇ) ಈ ಲೋಪಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಈ ನೌಕರರುಗಳನ್ನು ಬೇರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಉ) ಹೌದಾದರೆ ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಬಿ.ಬಿ. ಬೆಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ) ಅಭಿವೃದ್ಧಿ ಪ್ರಾಧಿಕಾರದ ಹೆಚ್ಚಿನ ಸಂಖ್ಯೆಯ ನೌಕರರು ಅದೇ ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೃತ್ತಿ ಹೊಂದುತ್ತಾರೆ.

ಆ) ಅಂತಹ ಘಟನೆಗಳು ಇದುವರೆಗೆ ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಕಾಯದೆ 1987ರಲ್ಲಿ ಅಭಿವೃದ್ಧಿ ಪ್ರಾಧಿಕಾರದ ನೌಕರರನ್ನು ಒಂದು ಅಭಿವೃದ್ಧಿ ಪ್ರಾದಿಕಾರದಿಂದ ಇನ್ನೊಂದು ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಲು ವಕಾಶವಿದೆ. ಅಭಿವೃದ್ಧಿ ಪ್ರಾಧಿಕಾರದ ವ್ಯಂದ ಮತ್ತು ನೇಮಕಾತಿ ನಿಯಮಗಳನ್ನು ಸೃಜಿಸುವ ವಿಷಯ ಪರಿಶೀಲನೆಯಲ್ಲಿದೆ. ಇದು ಅಂತಿಮವಾಗಿ ತೀರ್ಮಾನವಾದ ಕೂಡಲೇ ಒಂದು ಪ್ರಾಧಿಕಾರದಿಂದ ಇನ್ನೊಂದು ಪ್ರಾಧಿಕಾರಕ್ಕೆ ವರ್ಗಾಯಿಸುವ ವಿಷಯಕ್ಕೆ ಅಂತಿಮ ರೂಪ ಕೊಟ್ಟಂತಾಗುತ್ತದೆ.

**ಪುರಸಭೆ ನಗರಪಾಲಿಕೆಗಳನ್ನು ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುವುದರಿಂದ ಆಗುವ ತೊಂದರೆ**

262 ( 545) ಶ್ರೀ ಎ.ಎಸ್.ಗುರುಸ್ವಾಮಿ ( ಚಾಮುಂಡೇಶ್ವರಿ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಪುರಸಭೆ ನಗರಪಾಲಿಕೆ ಮುಂತಾದ ಸ್ಥಳದಲ್ಲಿ ಕಾರ್ಯನಿರ್ವಹಿಸುವ ನೌಕರರು ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುವುದರಿಂದ ಸ್ವಹಿತಾಸಕ್ತಿ ಬೆಳೆಸಿಕೊಳ್ಳುವ ಅಪಾಯ ಇಲ್ಲವೇ?

ಆ) ಇದರಿಂದಾಗಿ ಕೆಲಸದಲ್ಲಿ ನಿರಾಸಕ್ತಿ, ಆಶಿಸ್ತು ಮತ್ತು ನಿಷ್ಪೆ ಕೊರತೆ ಕಂಡುಬರುವುದಿಲ್ಲವೆ?

ಇ) ಇದರ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಈ) ಈ ನೌಕರರನ್ನು ಬೇರೆ ಪುರಸಭೆ, ನಗರಸಭೆಗೆ ವರ್ಗಾವಣೆ ಮಾಡುವ ಪ್ರಸ್ತಾವ ಸರ್ಕಾರದ ಪರಿಶೀನೆಯಲ್ಲಿದೆಯೇ?

ಉ) ಹೌದಾದರೆ ಯಾವಾಗ ಜಾರಿಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಹೌದು

ಆ) ಹೌದು

ಇ) ಪುರಸಭೆ, ನಗರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ನೌಕರರನ್ನು ಸರ್ಕಾರದ ವರ್ಗಾವಣೆ ನೀತಿಯಂತೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾಯಿಸಬಹುದಾಗಿದೆ.

ಈ) ಒಂದು ಪುರಸಭೆಯಿಂದ ಇನ್ನೊಂದು ಪುರಸಭೆ ನಗರಸಭೆಗೆ ಪರಸ್ಪರ ವರ್ಗಾಯಿಸುವ ಪದ್ದತಿ ಈಗಾಗಲೇ ಜಾರಿಯಲ್ಲಿದೆ.

ಉ) ಈಗಾಗಲೇ ಜಾರಿಯಲ್ಲಿದೆ.

**ಅಕ್ರಮ ಗಣಿಕಾರಿಕೆಯನ್ನು ಇಲಾಖೆಯ ಅಧಿಕಾರಿಗಳ ಸಂಬಂಧಿಗಳು ನಡೆಸುತ್ತಿರುವುದು**

264 (489) ಶ್ರೀ ಸಿ. ಗುರುಸ್ವಾಮಿ ( ಚಾಮರಾಜನಗರ):- ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಅಕ್ರಮ ಗಣಿಗಾರಿಕೆಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳ ಸಂಬಂಧಿಕರುಗಳು ನಡೆಸಿ ಇಲಾಖೆಗೆ ಬರಬೇಕಾದ ಆದಾಯ ಕಡಿಮೆ ಮಾಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಡೆದಿದ್ದಲ್ಲಿ ಯಾವ ಯಾವ ಸ್ಥಳಗಳಲ್ಲಿ ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.?

ಇ) ಚಾಮರಾಜ ನಗರ ವ್ಯಾಪ್ತಿಯಲ್ಲಿ ಇಂತಹ ಇಲಾಖಾ ಅಧಿಕಾರಿಗಳ ಸಂಬಂಧಿಗಳು ಅಕ್ರಮವಾಗಿ ಗಣಿಗಾರಿಕೆ ನಡೆಸಿ ಇಲಾಖೆಗೆ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದಕ್ಕೆ ಇಲಾಖೆಯ ಅಧಿಕಾರಿಗಳು ಕಾರಣರೆ? ಹೇಗೆ? ಇಂತಹ ಪ್ರಕರಣದಲ್ಲಿ ತಪ್ಪಿತಸ್ಥರೆಂದು ಕಂಡು ಬಂದಂತಹ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ.

ಉ) ಇಂತಹ ಪ್ರಕರಣಗಳು ರಾಜ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುವುದಿಲ್ಲವೇ?

ಶ್ರೀ ವಿ. ಮುನಿಯಪ್ಪ ( ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ.